ಕೊಡಗು ಜಿಲ್ಲೆಯ ಕೃಷಿ ಹೊಂಡಗಳ ನಿರ್ಮಾಣ

1370 (1951) - ಶ್ರೀ ಅಪ್ಪಚ್ಚು ರಂಜನ್ ಎಂ.ಪಿ (ಸೋಮವಾರಪೇಟೆ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳನ್ನು ಉತ್ತರಿಸುವರೆ?

1) ಕೊಡಗು ಜಿಲ್ಲೆಯಲ್ಲಿ ಕೃಷಿ ಇಲಾಖೆಯ ವತಿಯಿಂದ ಕೃಷಿ ಹೊಂಡಗಳನ್ನು ನಿರ್ಮಿಸಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದ್ದದೆಯೇ?

2) ಬಂದಿದ್ದಲ್ಲಿ ಇದರ ನಿರ್ಮಾಣದ ಮಾನ ದಂಡಗಳೇನು? ಫಲಾನುಭವಿಗಳು ಆಯ್ಕೆ ಮಾಡುವ ವಿಧಾನ ಹೇಗೆ?

3) ಇವರಿಗೆ ಸಹಾಯಧನ ವಿತರಿಸಲಾಗಿದೆಯೇ? ಸಹಾಯಧನ ಮೊತ್ತವೆಷ್ಟು (ತಾಲ್ಲೂಕುವಾರು ವಿವರ ನೀಡಿ)

ಶ್ರೀ ಟಿ.ಬಿ. ಜಯಚಂದ್ರ (ಕೃಷಿ ಸಚಿವರು)

1) ಬಂದಿದೆ.

2) ಜಲಾನಯನ ಪ್ರದೇಶಗಳನ್ನು ಗುರುತಿಸಿ ಕ್ರಿಯಾ ಯೋಜನೆಗಳನ್ನು ತಯಾರಿಸಿ ಸಂಬಂಧಪಟ್ಟ ಪ್ರಾಧಿಕಾರದಿಂದ ಅನುಮೋದನೆ ಪಡೆದು ಜಲಾನಯನಗಳನ್ನು ಕಿರುಜಲಾನಯನಗಳನ್ನಾಗಿ ವಿಂಗಡಿಸಿಕೊಂಡು ರೈತರು ಜಮೀನಿನಲ್ಲಿ ಉಪಯೋಗಕ್ಕನುಗುಣವಾಗಿ ಕೃಷಿ ಹೊಂಡಗಳನ್ನು ಫಲಾನುಭವಿಗಳ ಹಕ್ಕು ಪತ್ರಗಳನ್ನು ಪರಿಶೀಲಿಸಿ ಅವರ ಒಪ್ಪಿಗೆಯನ್ನು ಪಡೆದು ನಿರ್ಮಿಸಲಾಗುವುದು.

ಫಲಾನುಭವಿಗಳನ್ನು ಜನ ಪ್ರತಿನಿಧಿಗಳು, ಗ್ರಾಮ ಪಂಚಾಯ್ತಿ ಹಾಗೂ ಜಿಲ್ಲಾ ಪಂಚಾಯ್ತಿಗಳ ಸಭೆಗಳಲ್ಲಿ ಚರ್ಚಿಸಿ ಆಯ್ಕೆ ಮಾಡಲಾಗುವುದು ಮತ್ತು ಫಲಾನುಭವಿಗಳ ಪಟ್ಟಿಗಳನ್ನು ಕೃಷಿಸ್ಥಾಯಿ ಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆಯನ್ನು ಪಡೆಯಲಾಗುವುದು, ಹಾಗೂ ಮಿತ್ರ ಕೈಷಿಕ ಮಂಡಳಿಗಳ (ಜಲಾನಯನ ಸಂಘಗಳ) ಮುಖಾಂತರವು ಸಹ ಫಲಾನುಭವಿಗಳ ಆಯ್ಕೆ ಮಾಡಲಾಗುವುದು.

ಈ) ಸಹಾಯಧನದ ವ್ಯವಸ್ಥೆ ಇರುವುದಿಲ್ಲ. ಆದ್ದರಿಂದ ಪ್ರಶ್ನೆ ಉದ್ಭವಿಸುವುದಿಲ್ಲ. ನಿರ್ಮಾಣ ಕಾರ್ಯವನ್ನು ಇಲಾಖಾ ವತಿಯಿಂದ ಫಲಾನುಭವಿಗಳು ಹಾಗೂ ಮಿತ್ರ ಕೃಷಿಕ ಮಂಡಲಿಯ (ಜಲಾನಯನ ಸಂಘ) ಸಹಕಾರ ಹಾಗೂ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲಾಗುವುದು.

ಬೆಳಗಾಂವ ಜಿಲ್ಲೆಯ ದಡ್ಡಿ - ಕಂ ಬ್ರಿಜ್‌ಬಾಂದಾರ ಕಾಮಗಾರಿ

1371 (1665) - ಶ್ರೀ ಅಪ್ಪಯ್ಯಗೌಡ ಬಸಗೌಡ ಪಾಟೀಲ (ಸಂಕೇಶ್ವರ) : ಮಾನ್ಯ ಜಲ ಸಂಪನ್ಮೂಲ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳನ್ನು ಉತ್ತರಿಸುವರೆ?

1) ದಡ್ಡಿ-ಬ್ರಿಡ್ಜ್-ಕಂ ಬಾಂದಾರ ನಿರ್ಮಾಣದ ಕಾಮಗಾರಿಗೆ ಸರ್ಕಾರದ ಮಂಜೂರಾತಿ ನೀಡಿದ್ದರೂ ಈ ಕಾಮಗಾರಿಯನ್ನು ಪೂರ್ಣಗೊಳಿಸಲು ಇರುವ ತೊಂದರೆಗಳೇನು.

2) ಈ ಯೋಜನೆಗೆ ಸರ್ಕಾರವು ಒದಗಿಸಿರುವ ಹಣವೆಷ್ಟು? ಇಲ್ಲಿಯವರೆಗೆ ಎಷ್ಟು ಹಣ ಖರ್ಚು ಮಾಡಲಾಗಿದೆ.

3) ಈ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಜಲ ಸಂಪನ್ಮೂಲ ರಾಜ್ಯ ಸಚಿವರು)

1) ಬೆಳಗಾಂವ ಜಿಲ್ಲೆಯ ದಡ್ಡಿ ಬ್ರಿಡ್ಜ್ ಕಂ ಬ್ಯಾರೇಜಿನ ಕಾಮಗಾರಿಗೆ 88.50 ಲಕ್ಷ ರೂ.ಗಳಿಗೆ ಮಂಜೂರಾತಿ ದೊರೆತಿದ್ದು ಈ ಕಾಮಗಾರಿಯನ್ನು ಕರ್ನಾಟಕ ನಿರ್ಮಾಣ ನಿಗಮ ಬೆಂಗಳೂರು ಇವರಿಗೆ ವಹಿಸಕೊಡಲಾಗಿತ್ತು. ಸರ್ಕಾರದ ಆದೇಶದ ಮೇರೆಗೆ ಈ ಸಂಸ್ಥೆಗೆ ವಹಿಸಿದ ಕಾಮಗಾರಿಯನ್ನು ಮೊಟಕುಗೊಳಿಸಲು ಸೂಚಿಸಿರುವುದರಿಂದ ಈ ಯೋಜನೆಯ ಅಂತಿಮ ಅಳತೆಯನ್ನು ತೆಗೆದುಕೊಂಡು ದಿನಾಂಕ 31.12.01ರಂದು ಮೊಟಕುಗೊಳಿಸಿ ಅಂತಿಮ ಬಿಲ್ಲು ಪಾವತಿಗಾಗಿ ತಯಾರಿಸಲಾಗಿದೆ. ಬಾಕಿ ಉಳಿದ ಕೆಲಸವನ್ನು ಟೆಂಡರು ಕರೆದು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

2) ಈ ಯೋಜನೆಗೆ 2001-02 ನೇ ಸಾಲಿನ ಆಯವ್ಯಯದಲ್ಲಿ ರೂ. 1.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ. ಇಲ್ಲಿಯವರೆಗೆ ಈ ಯೋಜನೆಗೆ 3.76 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದ್ದು, ಕೆ.ಎಸ್.ಸಿ.ಸಿ.ಯ ಅಂತಿಮ ಬಿಲ್ಲು ಕೊಡಬೇಕಾಗಿದೆ.

3) ಈ ಯೋಜನೆಯ ಟೆಂಡರು ಪ್ರಕಟಣೆಯ ಮೇರೆಗೆ 18 ತಿಂಗಳಲ್ಲಿ (ಮಳೆಗಾಲ ಹೊರತುಪಡಿಸಿ) ಪೂರ್ಣಗೊಳಿಸುವ ಅವಧಿ ಇರುವುದು.

ಬೆಳಗಾವಿ ಜಿಲ್ಲೆಯ ಸಲಾಮವಾಡಿ ಏಕ ನೀರಾವರಿ ಯೋಜನೆ

1372 (1666) - ಶ್ರೀ ಅಪ್ಪಯ್ಯಗೌಡ ಬಸವಗೌಡ ಪಾಟೀಲ್ (ಸಂಕೇಶ್ವರ್) : ಮಾನ್ಯ ಜಲ ಸಂಪನ್ಮೂಲ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳನ್ನು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಸಲಾಮವಾಡಿ ಏತ ನೀರಾವರಿ ಯೋಜನೆಯ ಕಾಮಗಾರಿಯನ್ನು ಇನ್ನೂ ಪ್ರಾರಂಭಿಸದಿರಲು ಇರುವ ತೊಂದರೆಗಳೇನು.

ಆ) ಈ ಯೋಜನೆಗೆ ಒದಗಿಸಿರುವ ಹಣವೆಷ್ಟು ಹಾಗೂ ಈ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು.

ಶ್ರೀ ಎಸ್. ಕುಮಾರ್ಬಂಗಾರಪ್ಪ (ಜಲ ಸಂಪನ್ಮೂಲ ರಾಜ್ಯ ಸಚಿವರು)

ಅ) ಬೆಳಗಾಂವ್ ಜಿಲ್ಲೆಯ ಸಲಾಮವಾಡಿ ಏತ ನೀರಾವರಿ ಯೋಜನೆಯು 22.75 ಲಕ್ಷ ರೂ.ಗಳಿಗೆ ಮಂಜೂರಾತಿಯನ್ನು 12.93 ರಲ್ಲಿ ಪಡೆಯಲಾಗಿದೆ. ಈ ಯೋಜನೆಯೆ ಟೆಂಡರ್‌ನ್ನು ಸಿ.ಕೆ. ಮಣಿಯವರಿಗೆ ಗುತ್ತಿಗೆಯ ಆಧಾರದ ಮೇಲೆ ವಹಿಸಿಕೊಡಲಾಗಿತ್ತು. ಭೂಸ್ವಾಧೀನ ಪ್ರಕರಣದ ವಿಳಂಬದಿಂದ ಗುತ್ತಿಗೆದಾರರು ಈ ಕಾಮಗಾರಿಯನ್ನು ಪೂರ್ತಿಗೊಳಿಸಿದ ಕಾರಣ ಗುತ್ತಿಗೆದಾರರ ಗುತ್ತಿಗೆಯನ್ನು ಈ ಕಛೇರಿ ಪತ್ರ ಸಂ.3811 ದಿನಾಂಕ: 7-10-2001 ರಂದು ರದ್ದುಗೊಳಿಸಲಾಗಿದೆ. ಭೂಸ್ವಾಧೀನ ಪ್ರಕರಣವನ್ನು ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಇದೇ ಸಂದರ್ಭದಲ್ಲಿ ಈ ಯೋಜನೆಯನ್ನು ನಬಾರ್ಡ್ ಸಹಾಯ ಪಡೆಯಲು ಪ್ರಸ್ತಾವನೆಯನ್ನು 2001-02ನೇ ಸಾಲಿನ ದರಗಳ ಆಧಾರದ ಮೇರೆಗೆ ತಯಾರಿಸಿ (67.17 ಲಕ್ಷ ರೂ.ಗಳಿಗೆ ನಬಾರ್ಡ್ ಸಂಸ್ಥೆಗೆ ಸಲ್ಲಿಸಿದ ಪ್ರಸ್ತಾವನೆಗೆ ನಬಾರ್ಡ್‌ದಿಂದ ರೂ. 63.17 ಲಕ್ಷ